**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 186 ಕೆ.ಒ.ಎಲ್ 91

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 25ನೇ ನವೆಂಬರ್ 1991.

**ಅಧಿಕೃತ ಜ್ಞಾಪನ**

ವಿಷಯ :- ಕನ್ನಡ ಬಳಕೆ ಮಾಡದ ಅಧಿಕಾರಿಗಳ/ನೌಕರರ ಸಮಜಾಯಿಷಿ ಪಡೆಯುವ ಬಗ್ಗೆ.

ಉಲ್ಲೇಖ :- ಮಾನ್ಯ ಮುಖ್ಯಮಂತ್ರಿಯವರ ಟಿಪ್ಪಣಿ ದಿನಾಂಕ 20.11.1991.

ಸರ್ಕಾರಿ ಪತ್ರವ್ಯವಹಾರ ಮತ್ತು ಕಡತಗಳಲ್ಲಿನ ಟಿಪ್ಪಣಿಗಳನ್ನು ಒಳಗೊಂಡಂತೆ ಎಲ್ಲವುಗಳನ್ನೂ ಕನ್ನಡದಲ್ಲಿಯೇ ಮಾಡಬೇಕೆಂದು ಈಗಾಗಲೇ ಹಲವು ಬಾರಿ ಸೂಚಿಸಿದ್ದರೂ, ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದನ್ನು ಸರ್ಕಾರ ತೀವ್ರವಾಗಿ ಪರಿಗಣಿಸಿದೆ.

ಆದ್ದರಿಂದ, ಇನ್ನು ಮೇಲೆ ಕಡತದಲ್ಲಿನ ಟಿಪ್ಪಣಿಗಳು ಮತ್ತು ಪತ್ರ ವ್ಯವಹಾರ ಕನ್ನಡದಲ್ಲಿರದಿದ್ದರೆ ಅಂತಹ ಕಡತಗಳನ್ನು ಹಿಂದಿರುಗಿಸಿ ಸಂಬಂಧಪಟ್ಟ ಅಧಿಕಾರಿಗಳು/ನೌಕರರಿಂದ ಕಛೇರಿ ಮುಖ್ಯಸ್ಥರು ಸಮಜಾಯಿಷಿ ಪಡೆಯತಕ್ಕದ್ದೆಂದು ಮಾನ್ಯ ಮುಖ್ಯಮಂತ್ರಿಗಳು ಆದೇಶ ನೀಡಿದ್ದಾರೆ.

ಕೇಂದ್ರ ಸರ್ಕಾರ, ಹೊರ ರಾಜ್ಯಗಳು ಮತ್ತು ನ್ಯಾಯಾಲಯಗಳೊಡನೆ ನಡೆಸಬಹುದಾದ ಪತ್ರವ್ಯವಹಾರಗಳನ್ನು ಹೊರತುಪಡಿಸಿ ಉಳಿದೆಲ್ಲ ಪತ್ರ ವ್ಯವಹಾರಗಳು ಕನ್ನಡದಲ್ಲಿಯೇ ಇರಬೇಕೆಂದು ಮತ್ತೊಮ್ಮೆ ಪುನರುಚ್ಚರಿಸಿದೆ.

ಮೇಲಿನ ಸೂಚನೆಗಳನ್ನು ಎಲ್ಲಾ ಕಾರ್ಯದರ್ಶಿಗಳು, ಇಲಾಖಾ ಮುಖ್ಯಸ್ಥರು

ಜಿಲ್ಲಾಧಿಕಾರಿಗಳು, ಎಲ್ಲಾ ಅಧಿಕಾರಿಗಳು ಮತ್ತು ಎಲ್ಲಾ ನೌಕರರು ಕಟ್ಟುನಿಟ್ಟಾಗಿ ಪಾಲಿಸಲು ಈ ಮೂಲಕ ಆದೇಶಿಸಿದೆ.

ಸಹಿ/-

**(ಟಿ. ಪಿ. ಇಸ್ಸಾರ್),**

ಮುಖ್ಯ ಕಾರ್ಯದರ್ಶಿ,